# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 111(918+243)

ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್<br>(ವಿಧಾನ ಸಭೆಯಿಂದ ಚುನಾಯಿತರಾದವರು)<br>ಹಾಗೂ ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 23-02-2023.

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ರಾಜ್ಯ ಸರ್ಕಾರ ಜಾರಿಗೊಳಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಯೋಜನೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)</td><td>ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ರಾಜ್ಯ ಸರ್ಕಾರವು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಸುತ್ತಿದೆ.<br>1. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಯೋಜನೆ<br>2. ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ಯೋಜನೆ.<br>3. ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ ಯೋಜನೆ.<br>4. ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ:<br>(ಸಂಪೂರ್ಣ ಮಾಹಿತಿಯನ್ನು "ಅನುಬಂಧ-1 & 2" ರಲ್ಲಿ ನೀಡಲಾಗಿದೆ).<br><u>ಕರ್ನಾಟಕ ರಾಜ್ಯ ವಕ್ಫ್ ಮಂಡಳ</u><br>ಕರ್ನಾಟಕ ರಾಜ್ಯ ವಕ್ಫ್ ಮಂಡಳಯ ವಕ್ಫ್ ಆಸ್ತಿಗಳನ್ನು ಗಣಕೀಕರಣಗೊಳಸಿರುವ ಅಡಿಯಲ್ಲಿ ಕೇಂದ್ರ ಸರ್ಕಾರದ QWBTS ಯೋಜನೆಯನ್ನು ಜಾರಿಗೊಳಸಿದೆ. ಮತ್ತು ಕೇಂದ್ರ ಸರ್ಕಾರದ ಶಹರಿ ಸಂಪತ್ತು ವಿಕಾಸ ಯೋಜನೆ ಅಡಿಯಲ್ಲಿ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗೆ ಸಾಲ ನೀಡಲಾಗುತ್ತಿದೆ.</td></tr>
<tr><td>ಆ.</td><td>ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳಗೆ ವಿವಿಧ ಯೋಜನೆ ಅಡಿಯಲ್ಲಿ ವಿದ್ಯಾರ್ಥಿವೇತನ ನೀಡಲಾಗಿದೆ; (ಪೂರ್ಣ ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ಹಾಗೂ ಮೆರಿಟ್-ಕಮ್- ಮೀನ್ಸ್ ಯೋಜನೆಯಡಿ ಈ ಕೆಳಕಂಡಂತೆ ವಿದ್ಯಾರ್ಥಿವೇತನವನ್ನು ನೀಡಲಾಗಿದೆ.<br>(ರೂ.ಕೋಟಿಗಳಲ್ಲಿ)<table><tr><th rowspan="2">ಆಯವ್ಯಯ ವರ್ಷ</th><th colspan="2">ಒಟ್ಟು</th></tr><tr><th>ಭೌತಿಕ</th><th>ಆರ್ಥಿಕ</th></tr><tr><td>2019-20</td><td>8,82,424</td><td>304.48</td></tr><tr><td>2020-21</td><td>7,12,792</td><td>281.06</td></tr><tr><td>2021-22</td><td>796374</td><td>273.68</td></tr></table></td></tr>
<tr><td>ಇ.</td><td>ಅಲ್ಪಸಂಖ್ಯಾತ ವಿದ್ಯಾರ್ಥಿಗಳಗೆ ವಿದ್ಯಾರ್ಥಿ ವೇತನ ನೀಡಲು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿರುವುದು ನಿಜವೇ; (ವಿವರ ನಿಡುವುದು)</td><td>ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಾಲಯ ರವರ ಅಧಿಸೂಚನೆ ಸಂಖ್ಯೆ: SS-1/2020-Scholarship -MoMA GoI-Ministry of Minority Affairs, Dated:- 29.11.2022 ರಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ</td></tr>
</table>

| | | |
|---|---|---|
| | | ಶಿಕ್ಷಣ ಹಕ್ಕು ಕಾಯ್ದೆ 2009 ರಡಿ 1 ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಶಿಕ್ಷಣವು ಉಚಿತ ಹಾಗೂ ಕಡ್ಡಾಯವಾಗಿರುವುದರಿಂದ 2022-23ನೇ ಸಾಲಿನಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು 9 ರಿಂದ 10ನೇ ತರಗತಿಯ ವರೆಗೆ ಸೀಮಿತಗೊಳಿಸಿ ಆದೇಶಿಸಲಾಗಿದೆ.<br><br>ರಾಜ್ಯ ಸರ್ಕಾರದಿಂದ ಯಾವುದೇ ಹೊಸ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುವುದಿಲ್ಲ. |
| ಈ. | ಹೊಸ ಮಾರ್ಗಸೂಚಿಯನುಸಾರ ಪ್ರಿ-ಮ್ಯಾಟ್ರಿಕ್, ಪೋಸ್ಟ್-ಮ್ಯಾಟ್ರಿಕ್ ಸೇರಿದಂತೆ ವಿವಿಧ ಯೋಜನೆಗಳಡಿ ಸುಮಾರು 14 ಸಾವಿರ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಬಂದಿದೆ, ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಯನುಸಾರ 1 ರಿಂದ 8 ನೇ ತರಗತಿಯ 7,61,418 ವಿದ್ಯಾರ್ಥಿಗಳು ವಿದ್ಯಾರ್ಥಿವೇತನದಿಂದ ವಂಚಿತರಾಗುತ್ತಾರೆ. ಈ ವಿದ್ಯಾರ್ಥಿಗಳನ್ನು ವಿದ್ಯಾರ್ಥಿವೇತನಕ್ಕೆ ಪರಿಗಣಿಸುವಂತೆ ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರವನ್ನು ದಿನಾಂಕ:25.11.2022 ರ ಪತ್ರದಲ್ಲಿ ಕೋರಲಾಗಿರುತ್ತದೆ. |
| ಉ. | ಕಳೆದ ಐದು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನ ಕ್ರಮೇಣವಾಗಿ ಕಡಿಮೆ ನೀಡುತ್ತಿದ್ದು, ಇದರಿಂದ ವಿದ್ಯಾರ್ಥಿಗಳು ಸಂಕಷ್ಟ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಾಲಯ, ನವದೆಹಲಿ ರವರಿಂದ ಪ್ರತಿ ವರ್ಷವು ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ ನೀಡುವ ಸಲುವಾಗಿ ರಾಜ್ಯವಾರು (ಸಮುದಾಯವಾರು) ಭೌತಿಕ ಹಾಗೂ ಆರ್ಥಿಕ ಗುರಿಯನ್ನು ನಿಗದಿಪಡಿಸಿ ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal) ಮೂಲಕ ಅರ್ಜಿಗಳನ್ನು ಕರೆಯಲಾಗುತ್ತದೆ. ಸರ್ಕಾರದಿಂದ ನಿಗದಿಪಡಿಸಿರುವ ಗುರಿಯಂತೆ ಅರ್ಹ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಿ ವಿದ್ಯಾರ್ಥಿವೇತನವನ್ನು ಪಡೆಯುತ್ತಿರುತ್ತಾರೆ. ಈ ನಿಗದಿತ ಗುರಿಯಿಂದ ಹೊರಗುಳಿದ ಅರ್ಹ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State-Scholarship Portal) ಮೂಲಕ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತಿದೆ.<br>ಹಾಗಾಗಿ ಅರ್ಜಿ ಸಲ್ಲಿಸಿದ ಪ್ರತಿ ಅರ್ಹ ವಿದ್ಯಾರ್ಥಿಗೂ ವಿದ್ಯಾರ್ಥಿವೇತನ ಪಾವತಿಸಲಾಗುತ್ತಿದೆ. |
| ಋ | ಪ್ರಸ್ತುತ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನೀಡುವ ವೇತನವನ್ನು ಜನಸಂಖ್ಯೆ ಆಧಾರದ ಮೇಲೆ ಹೆಚ್ಚಿಸಲು ರಾಜ್ಯ ಸರ್ಕಾರ ಯೋಚಿಸುತ್ತಿದೆಯೇ; (ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು) | ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

| | | |
|---|---|---|
| ಎ | ಪ್ರಸಕ್ತ ವರ್ಷದಲ್ಲಿ ಎಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ; ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು.) | ಪ್ರಸಕ್ತ ವರ್ಷ 2022-23 ರಲ್ಲಿ ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal) ನಲ್ಲಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ. |

| ಕ್ರ. ಸಂ | ಯೋಜನೆಯ ಹೆಸರು | ಹೊಸ ಅರ್ಜಿಗಳು | ನವೀಕರಣ ಅರ್ಜಿಗಳು | ಒಟ್ಟು ಅರ್ಜಿಗಳು |
|---|---|---|---|---|
| 1 | ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | 493443 | 503551 | 996994 |
| 2 | ಮೆಟ್ರಿಕ್ - ನಂತರ ವಿದ್ಯಾರ್ಥಿವೇತನ | 169203 | 29453 | 198656 |
| 3 | ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ | 14534 | 13861 | 28395 |
| ಒಟ್ಟು | | 677180 | 546865 | 1224045 |

ಭಾರತ ಸರ್ಕಾರದಿಂದ ಆರ್ಥಿಕ ವರ್ಷದ ಕೊನೆಯವರೆಗೂ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತದೆ. ಸರ್ಕಾರದಿಂದ ನಿಗದಿಪಡಿಸಿರುವ ಗುರಿಯಂತೆ ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯುತ್ತಾರೆ. ಈ ನಿಗದಿತ ಗುರಿಯಿಂದ ಹೊರಗುಳಿದ ಅರ್ಹ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal) ಮೂಲಕ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತದೆ.

2022-23 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ರೂ.67.00 ಕೋಟಿ ಅನುದಾನವನ್ನು ಮೀಸಲಿಡಲಾಗಿದ್ದು , ಇದರಲ್ಲಿ 63.20 ಕೋಟಿ ಅನುದಾನ ವೆಚ್ಚ ಮಾಡಲಾಗಿದೆ. ಇದರಲ್ಲಿ 134510 ವಿದ್ಯಾರ್ಥಿಗಳಿಗೆ ನೇರ ನಗದು ವರ್ಗಾವಣೆ (Direct Benefit Transfer -DBT) ಮುಖಾಂತರ ಪಾವತಿಸಲಾಗಿದೆ.

ಸಂಖ್ಯೆ: MWD 36 LMQ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) ಹಾಗೂ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)- ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:-918+243 ಕ್ಕೆ ಉತ್ತರ

## ಕಾರ್ಯಕ್ರಮಗಳ ವಿವರ ಮತ್ತು ಮಾರ್ಗಸೂಚಿಗಳು

## I. ವಿದ್ಯಾರ್ಥಿವೇತನ ಕಾರ್ಯಕ್ರಮ

ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತಿದೆ.

ಎ) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:-

9ನೇ ಮತ್ತು 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 1.00 ಲಕ್ಷಕ್ಕೆ ಮೀರಿರಬಾರದು, ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ಶೇ.50 ರಷ್ಟು ಅಂಕ ಗಳಿಸಿರಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದ ಸರ್ಕಾರಿ/ಅನುದಾನಿತ/ಅನುದಾನ ರಹಿತ ಹಾಗೂ ಖಾಸಗಿ ಶಾಲೆಗಳಲ್ಲಿ 9ನೇ ಮತ್ತು 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ವಿದ್ಯಾರ್ಥಿವೇತನ ನೀಡಲಾಗುವುದು. ಕೇಂದ್ರ ಸರ್ಕಾರದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಅನುದಾನದಿಂದ ನೀಡಲಾಗುವುದು.

| ತರಗತಿ | ಭಾರತ ಸರ್ಕಾರ | ಕರ್ನಾಟಕ ಸರ್ಕಾರ |
|---|---|---|
| IX to X (ಸರ್ಕಾರಿ ಶಾಲೆ) | Rs. 1,000/-p.a | Rs. 1,000/-p.a |
| IX (ಖಾಸಗಿ ಶಾಲೆ) | Upto Rs. 5,000/-p.a | Rs.4,000/-p.a |
| X (ಖಾಸಗಿ ಶಾಲೆ) | | Rs. 4,500/-p.a |

ಬಿ) ಮೆಟ್ರಿಕ್ ನಂತರ ವಿದ್ಯಾರ್ಥಿವೇತನ:-

ಪದವಿ ಪೂರ್ವ (ತತ್ಸಮಾನ), ಪದವಿ, ಸ್ನಾತಕೋತ್ತರ ಹಾಗೂ ಎಂ.ಫಿಲ್, ಪಿ.ಹೆಚ್.ಡಿ ಯವರಿಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. ಹಿಂದಿನ ವರ್ಷದ ಪರೀಕ್ಷೆ/ಸೆಮಿಸ್ಟರ್‌ನಲ್ಲಿ ಶೇ. 50 ರಷ್ಟು ಅಂಕ ಗಳಿಸಿರಬೇಕು. ಕುಟುಂಬದ ವಾರ್ಷಿಕ

ವರಮಾನ ರೂ.2.00 ಲಕ್ಷ ಮೀರಿರಬಾರದು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ರಾಜ್ಯದ ಸರ್ಕಾರಿ/ ಅನುದಾನಿತ/ಅನುದಾನ ರಹಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪಾವತಿಸಿದ ದಾಖಲಾತಿ ಶುಲ್ಕ ಹಾಗೂ ಭೋಧನ ನಿರ್ವಹಣೆ ಶುಲ್ಕದನ್ವಯ ಈ ಕೆಳಕಂಡಂತೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿವೇತನ ವಂಚಿತರಾದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಅನುದಾನದಿಂದ ನೀಡಲಾಗುವುದು.

| ತರಗತಿ/ಕೋರ್ಸ್ | ಭಾರತ ಸರ್ಕಾರ | ಕರ್ನಾಟಕ ಸರ್ಕಾರ |
|---|---|---|
| ಪದವಿ ಪೂರ್ವ (ತತ್ಸಮಾನ) | Upto Rs. 10,800/-p.a | Rs. 9,000/- p.a |
| ತಾಂತ್ರಿಕ ಮತ್ತು ವೃತ್ತಿಪರ (ಪಿ.ಯು.ಸಿ ತತ್ಸಮಾನ) | Upto Rs. 13,800/- p.a | |
| ಪದವಿ ಮತ್ತು ಸ್ನಾತಕೋತ್ತರ ಪದವಿ | Upto Rs. 8,700/- p.a | Rs.3,000/- p.a |
| ಎಂ.ಫಿಲ್ ಮತ್ತು ಪಿ.ಹೆಚ್.ಡಿ. | Upto Rs. 12,000/- p.a | Rs.3,000/- p.a |

<u>ಸಿ) ಮೆರಿಟ್-ಕಮ್-ಮೀನ್ಸ್ ಆಧಾರಿತ ವಿದ್ಯಾರ್ಥಿ ವೇತನ:</u>

ತಾಂತ್ರಿಕ ಹಾಗೂ ವೃತ್ತಿಪರ ವಿವಿಧ ಕೋರ್ಸ್‌ಗಳಲ್ಲಿ (ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾತಿಗೆ ಅವಕಾಶವಿದೆ. ಈ ಯೋಜನೆಯಡಿಯಲ್ಲಿ ತಾಂತ್ರಿಕ ಹಾಗೂ ವೃತ್ತಿಪರ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. ವಿದ್ಯಾರ್ಥಿಯು ಹಿಂದಿನ ವರ್ಷದ ಪರೀಕ್ಷೆ/ಸೆಮಿಸ್ಟರ್‌ನಲ್ಲಿ ಶೇ. 50 ರಷ್ಟು ಅಂಕಗಳಿಸಿರಬೇಕು. ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳು ಮೀರಿರಬಾರದು. ಗರಿಷ್ಠ ರೂ.30,000/- ವಿದಾರ್ಥಿವೇತನವನ್ನು ನೀಡಲಾಗುವುದು. ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿವೇತನ ವಂಚಿತರಾದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಅನುದಾನದಿಂದ ನೀಡಲಾಗುವುದು.

| ತರಗತಿ/ಕೋರ್ಸ್ | ಭಾರತ ಸರ್ಕಾರ | ಕರ್ನಾಟಕ ಸರ್ಕಾರ |
|---|---|---|
| ತಾಂತ್ರಿಕ ಹಾಗೂ ವೃತ್ತಿಪರ ವಿವಿಧ ಕೋರ್ಸ್ | Up to Rs.30,000/- p.a | Rs. 25,000/- p.a |

DIRECTOR
Directorate of Minorities
BANGALORE

# ಅನುಬಂಧ-2

ರಾಜ್ಯದಲ್ಲಿ ಕೇಂದ್ರ ಸರ್ಕಾರದ ಅಲ್ಪಸಂಖ್ಯಾತರ ಮಂತ್ರಾಲಯದ ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ ಯೋಜನೆಯನ್ನು ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿ ಶೇಕಡ 60 ಕೇಂದ್ರಪಾಲು ಹಾಗೂ ಶೇಕಡ 40 ರಷ್ಟು ರಾಜ್ಯಪಾಲಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶವು ಅಲ್ಪಸಂಖ್ಯಾತರಿಗಾಗಿ ಶಿಕ್ಷಣ, ಆರೋಗ್ಯ, ಕೌಶಲ್ಯ ಅಭಿವೃದ್ಧಿ, ಕ್ಷೇತ್ರಗಳಲ್ಲಿ ಸ್ವತ್ತುಗಳನ್ನು ನಿರ್ಮಾಣ ಮಾಡುವ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ಕೌಶಲ್ಯ ಕೇಂದ್ರ, ವಿದ್ಯಾರ್ಥಿನಿಲಯಗಳು, ಸದ್ಭಾವನ ಮಂಟಪ, ಸಾಮಾನ್ಯ ಸೇವಾ ಕೇಂದ್ರ ಹಾಗೂ ಅಂಗನವಾಡಿ ಕೇಂದ್ರಗಳನ್ನು ನಿರ್ಮಾಣ ಕೈಗೊಳ್ಳಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ಈ ಯೋಜನೆಯಡಿ ಮಂಜೂರಾಗಿರುವ ಭೌತಿಕ ಹಾಗೂ ಆರ್ಥಿಕ ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ವರ್ಷ | ಅನುಮೋದನೆಯಾಗಿರುವ ಕೇಂದ್ರ ಪಾಲು | ಅನುಮೋದನೆಯಾಗಿರುವ ರಾಜ್ಯ ಪಾಲು | ಒಟ್ಟು ಅನುಮೋದನೆಯಾಗಿರುವ ಮೊತ್ತ | (ಕೋಟಿಗಳಲ್ಲಿ) |
|---|---|---|---|---|---|
| 1 | 2016-17 | 62.77 | 41.91 | 104.68 | |
| 2 | 2017-18 | 55.45 | 36.97 | 92.43 | |
| 3 | 2018-19 | 100.14 | 66.78 | 166.92 | |
| 4 | 2019-20 | 95.7 | 63.8 | 159.5 | |
| 5 | 2020-21 | 62.98 | 41.98 | 104.97 | |
| 6 | 2021-22 | 34.218 | 22.812 | 57.03 | |
| | **ಒಟ್ಟು** | **411.258** | **274.252** | **685.53** | |

| ಕ್ರಮ ಸಂಖ್ಯೆ | ಜಿಲ್ಲೆ | ಘಟಕಗಳ ಸಂಖ್ಯೆ | ಪೂರ್ಣಗೊಂಡ ಘಟಕಗಳು | ಕಾಮಗಾರಿ ಪ್ರಗತಿಯಲ್ಲಿರುವ ಘಟಕಗಳು | ಪ್ರಾರಂಭವಾಗಬೇಕಾದ ಘಟಕಗಳು |
|---|---|---|---|---|---|
| 1 | ಬಾಗಲಕೋಟೆ | 11 | 6 | 5 | 0 |
| 2 | ಬೆಳಗಾವಿ | 6 | 3 | 3 | 0 |
| 3 | ಬಳ್ಳಾರಿ | 7 | 4 | 3 | 0 |
| 4 | ಬೆಂಗಳೂರು ಗ್ರಾಮಾಂತರ | 5 | 3 | 2 | 0 |
| 5 | ಬೆಂಗಳೂರು ನಗರ | 1 | 0 | 0 | 1 |
| 6 | ಬೀದರ್ | 12 | 3 | 9 | 0 |
| 7 | ಚಿಕ್ಕಬಳ್ಳಾಪುರ | 6 | 6 | 0 | 0 |
| 8 | ಚಿಕ್ಕಮಗಳೂರು | 9 | 7 | 2 | 0 |
| 9 | ಚಿತ್ರದುರ್ಗ | 2 | 2 | 0 | 0 |
| 10 | ದಕ್ಷಿಣ ಕನ್ನಡ | 18 | 4 | 14 | 0 |
| 11 | ದಾವಣಗೆರೆ | 11 | 0 | 11 | 0 |
| 12 | ಗದಗ | 6 | 2 | 4 | 0 |
| 13 | ಹಾಸನ | 4 | 3 | 1 | 0 |
| 14 | ಹಾವೇರಿ | 12 | 8 | 4 | 0 |
| 15 | ಕಲ್ಬುರ್ಗಿ | 7 | 2 | 5 | 0 |
| 16 | ಕೋಲಾರ | 13 | 11 | 2 | 0 |
| 17 | ಕೊಪ್ಪಳ | 7 | 5 | 2 | 0 |
| 18 | ರಾಯಚೂರು | 17 | 11 | 6 | 0 |
| 19 | ರಾಮನಗರ | 8 | 3 | 5 | 0 |
| 20 | ಶಿವಮೊಗ್ಗ | 8 | 7 | 1 | 0 |
| 21 | ತುಮಕೂರು | 8 | 4 | 4 | 0 |
| 22 | ಉತ್ತರ ಕನ್ನಡ | 5 | 1 | 4 | 0 |
| 23 | ವಿಜಯಪುರ | 6 | 4 | 2 | 0 |
| 24 | ಯಾದಗಿರಿ | 9 | 4 | 5 | 0 |
| | **ಒಟ್ಟು** | **198** | **103** | **94** | **1** |

## KARNATAKA LEGISLATIVE COUNCIL

| | | |
|---|---|---|
| 1. | Starred Question No. | : 111 (918 + 243) |
| 2. | Name of the Member | : Sri Naseer Ahmed and Sri K.A.Tippeswamy |
| 3. | Date of reply | : 23-02-2023. |
| 4. | Replies to be given by | : Hon'ble Chief Minister |

| | Question | Answer |
|---|---|---|
| A) | What are the Minority Welfare Schemes implemented by the State Government under various Central Government Schemes: (Provide complete information) | The following schemes are implemented by the State Government through Minority Welfare Department under various schemes of the Central Government :-<br>1. **Pre-Matric Scholarship Scheme**<br>2. **Post Matric Scholarship Scheme**<br>3. **Merit-cum-Means Scholarship Scheme**<br>4. **Pradhan Mantri Jan Vikas Karyakrama (PMJVK):**<br>( Details are furnished in **Annexure-1 & 2**)<br>**KARNATAKA STATE BOARD OF AUQAF:**<br>Karnataka State Waqf Board has implemented the central government's QWBTS scheme under which the Waqf properties have been computerized and under Central Government's Shahri Sampath Vikas Scheme, loans are being provided for development of Waqf Institutions. |
| B) | How many minority students have been given scholarships under various schemes in the last three years? : (Provide complete information) | Details of scholarship distributed in pre-metric, Post Metric and Metric –Cum-Means schemes are as follows :-<br>(Rs. In Crores)<br>**Financial year** \| **Total: Physical** \| **Financial**<br>2019-20 \| 8,82,424 \| 304.48<br>2020-21 \| 7,12,792 \| 281.06<br>2021-22 \| 7,96,374 \| 273.68 |
| C) | Is it true that new guidelines have been issued for awarding scholarships to minority | The Ministry of Minority Affairs, Government of India in its Notification No:-SS-1/2020-Scholarship – MoMA GoI - Ministry of Minority Affairs, Dated:-29.11.2022 has informed that as the |

| | | |
|---|---|---|
| | students:(Provide details) | Right to Education (RTE) Act 2009 makes it obligatory for the Government to provide free and compulsory elementary education (classes I to VIII) to each and every child, accordingly it has been decided to award scholarships to the students of Classes IX and X only.<br>There are no new guidelines from the Government of Karnataka. |
| D) | Has it come to the notice of the government that under various schemes including pre-matric, post-matric, etc., about 14 thousand students are being deprived of scholarships: If so, what steps have been taken by the government in this regard: (Provide details) | Yes. As per the new guidelines from the Ministry of Minority Affairs, Government of India 7,61,418 students will be left out of the scholarship. A letter has been addressed to the Ministry of Minority Affairs, Government of India on 25.11.2022 to consider these students for scholarship. |
| E) | During the last five years, the central and state governments have gradually reduced the number of scholarships offered to minority students. Has it come to the notice of the government that the students are facing hardship due to this: If so, what are the measures taken by the government to rectify this: (Give full details) | The Ministry of Minority Affairs, Government of India, New Delhi invites applications through the National Scholarship Portal by setting a state-wise physical and financial target for providing scholarships to minorities every year.<br>Eligible students apply and get the scholarship as per the target set by the government. Students falling outside this target will receive the scholarship by the Government of Karnataka through the State Scholarship Portal.<br>Thus, the scholarship will be paid to every eligible student who have applied online. |
| F) | Whether the State Government is considering to increase the scholarship given to minority students on population basis at present: (If so, provide full information) | No such proposal before the Government. |

<table>
<tr><td>G)</td><td>How many students have applied for scholarships in the current year: How many of them have been awarded scholarships? (Provide complete information)</td><td>The details of the students who have applied in the present academic year on the National Scholarship Portal are as detailed below.

| Sl. No | Name of Scheme | New Applications | Renewal Applications | Total Applications |
|---|---|---|---|---|
| 1 | Pre-Matric Scholarship | 493443 | 503551 | 996994 |
| 2 | Post Matric Scholarship | 169203 | 29453 | 198656 |
| 3 | Merit-cum-Means Scholarship Scheme | 14534 | 13861 | 28395 |
| **Total Applications** | | **677180** | **546865** | **1224045** |

The scholarship is disbursed by the Government of India till the end of the financial year. Eligible students will get scholarships as per the target set by the Government of India. Students falling outside this physical target will be disbursed by the Government of Karnataka to these remaining eligible students through the State Scholarship Portal.

For the academic year 2022-23, the Government of Karnataka has sanctioned a budget of Rs.67.00 crores. Out of this an expenditure of Rs.63.20 crores has been done through scholarship disbursal to 134510 students through Direct Benefit Transfer (DBT).</td></tr>
</table>

No. MWD 36 LMQ 2023

**(BASAVARAJ BOMMAI)**
Chief Minister